# 10ನೇ ತರಗತಿ ಅರ್ಧ ವಾರ್ಷಿಕ ಪರೀಕ್ಷೆ, ಸೆಪ್ಟೆಂಬರ್-2019

**ಸಮಯ : 3.00 ಗಂಟೆ** **ವಿಷಯ : ಸಮಾಜ ವಿಜ್ಞಾನ** **ಗರಿಷ್ಠ ಅಂಕಗಳು : 80**

---

**I ಈ ಕೆಳಕಂಡ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.** **8x1=8**

1. ಭಾರತದಲ್ಲಿದ್ದ ಫ್ರೆಂಚರ ರಾಜಧಾನಿ
   ಎ. ಗೋವಾ ಬಿ. ಮುಂಬೈ ಸಿ. ಪಾಂಡಿಚೆರಿ ಡಿ. ಕೋಲ್ಕತ್ತಾ
2. ಭಾರತದಲ್ಲಿ ಈತನು ನೀಡಿದ ವರದಿಯು ಬ್ರಿಟಿಷರ ಅವಧಿಯಲ್ಲಿ ಭಾರತದಲ್ಲಿ ಶಿಕ್ಷಣದ ಸಾರ್ವತ್ರೀಕರಣಕ್ಕೆ ಸಹಾಯಕವಾಯಿತು
   ಎ. ಚಾರ್ಲ್ಸ್ ವುಡ್ ಬಿ. ಮೆಕಾಲೆ ಸಿ. ವಾರನ್ ಹೇಸ್ಟಿಂಗ್ಸ್ ಡಿ. ಡಂಕನ್
3. ಪಂಚಶೀಲ ಒಪ್ಪಂದಕ್ಕೆ ಸಹಿ ಹಾಕಿದ ದೇಶಗಳು
   ಎ. ಭಾರತ-ಚೀನಾ ಬಿ. ಭಾರತ-ಪಾಕಿಸ್ತಾನ ಸಿ. ಭಾರತ - ಶ್ರೀಲಂಕಾ ಡಿ. ಭಾರತ-ಅಮೇರಿಕಾ
4. "ಅಸ್ಪೃಶ್ಯತೆ ಜಾತಿಯ ಅತ್ಯಂತ ತಿರಸ್ಕಾರಾರ್ಹವಾದ ಅಭಿವ್ಯಕ್ತಿ" ಎಂದು ಹೇಳಿದವರು
   ಎ. ಡಾ. ಬಿ.ಆರ್. ಅಂಬೇಡ್ಕರ್ ಬಿ. ಮಹಾತ್ಮ ಗಾಂಧೀಜಿ ಸಿ. ದಯಾನಂದ ಸರಸ್ವತಿ ಡಿ. ಜ್ಯೋತಿ ಬಾಪುಲೆ
5. ಕಲಾಕಾರನೊಬ್ಬ ತನ್ನ ಆತ್ಮ ಸಂತೋಷಕ್ಕಾಗಿ ಚಿತ್ರ ಬಿಡಿಸುತ್ತಾನೆ. - ಇದು ಯಾವ ಪ್ರಕಾರದ ದುಡಿಮೆಗೆ ಸಂಬಂಧಿಸಿದ್ದು
   ಎ. ಸಂಭಾವನೆ ಸಹಿತ ದುಡಿಮೆ ಬಿ. ಶ್ರಮ ವಿಭಜನೆ ಸಿ. ಸಂಘಟಿತ ದುಡಿಮೆ ಡಿ. ಸಂಭಾವನೆ ರಹಿತ ದುಡಿಮೆ
6. ಭಾರತದ ಆದರ್ಶ ಕಾಲಮಾನವನ್ನು ಸೂಚಿಸುವ ರೇಖಾಂಶ
   ಎ. $82\frac{1}{2}^0$ ಪೂರ್ವ ರೇಖಾಂಶ ಬಿ. ಗ್ರೀನ್ ವಿಚ್ ರೇಖಾಂಶ ಸಿ. $180^0$ ರೇಖಾಂಶ ಡಿ. ಕರ್ಕಾಟಕ ಸಂಕ್ರಾಂತಿ ವೃತ್ತ
7. ಭಾರತದ ಆಡಳಿತ ವ್ಯವಸ್ಥೆಯಲ್ಲಿ ಸಂವಿಧಾನದ 73ನೇ ತಿದ್ದುಪಡಿ ಒಂದು ಪ್ರಮುಖ ಮೈಲುಗಲ್ಲಾಗಿದೆ ಕಾರಣ
   ಎ. ನಾಗರಿಕ ಸೇವಾ ಪದ್ಧತಿ ಜಾರಿ ಬಿ. ಏಕರೂಪದ ಪಂಚಾಯತ್ ರಾಜ್ ವ್ಯವಸ್ಥೆ ಜಾರಿ
   ಸಿ. ಮೀಸಲಾತಿ ವ್ಯವಸ್ಥೆ ಜಾರಿ ಡಿ. ಸಂಸತ್ ವ್ಯವಸ್ಥೆಯಲ್ಲಿ ಸುಧಾರಣೆ
8. ವಿಪ್ರೋ : ಅಜೀಂ ಪ್ರೇಮ್ ಜೀ : :ಇನ್ಫೋಸಿಸ್ :....................
   ಎ. ಡಾ. ಪ್ರತಾಪ್ ರೆಡ್ಡಿ ಬಿ. ಕಿರಣ್ ಮುಜುಂದಾರ್ ಸಿ. ಡಾ. ನಾರಾಯಣಮೂರ್ತಿ ಡಿ. ವರ್ಗಿಸ್ ಕುರಿಯನ್

**II ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **8x1=8**

9. ಮ್ಯಾಂಗ್ರೋವ್ ಕಾಡುಗಳ ವಿಶೇಷತೆ ಏನು?
10. ಶ್ರಮ ವಿಭಜನೆ ಎಂದರೇನು?
11. ಪ್ರತಿಯೊಂದು ರಾಷ್ಟ್ರಕ್ಕೂ ನಿಶ್ಯಸ್ತ್ರೀಕರಣ ಅಗತ್ಯ ಏಕೆ?
12. ಚಳಿಗಾಲದಲ್ಲಿ ಭಾರತದ ದಕ್ಷಿಣ ಭಾಗವು ಬೆಚ್ಚನೆಯ ವಾಯುಗುಣ ಹೊಂದಿರಲು ಕಾರಣವೇನು?
13. ಲಿಂಗಾನುಪಾತ ಎಂದರೇನು?
14. ಉದ್ಯಮಿಯು ಜನರ ಜೀವನ ಮಟ್ಟವನ್ನು ಉತ್ತಮಗೊಳಿಸಲು ಶ್ರಮಿಸುತ್ತಾನೆ, ಹೇಗೆ?
15. ಲಾರ್ಡ್ ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜಿನಾಮೆ ನೀಡಿ ಸ್ವದೇಶಕ್ಕೆ ಮರಳಲು ಕಾರಣವೇನು?
16. ಭಾರತೀಯ ಸೈನಿಕರು ಹೊಸ ರಾಯಲ್ ಎನ್ ಫೀಲ್ಡ್ ಬಂದೂಕು ಉಪಯೋಗಿಸದಿರಲು ಕಾರಣವೇನು?

**III ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **8x2=16**

17. ಭಾರತಕ್ಕೆ ಸಮುದ್ರಮಾರ್ಗ ಕಂಡುಹಿಡಿಯಲು ಸಹಾಯಕವಾದ ಅಂಶಗಳಾವುವು?
18. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಭಾರತೀಯ ರಾಜರು ಈಸ್ಟ್ ಇಂಡಿಯಾ ಕಂಪನಿಯ ಕೈಗೊಂಬೆ ಆಗಿದ್ದರು. ಸಮರ್ಥಿಸಿ.
19. ಪಂಚಶೀಲ ತತ್ವಗಳಾವುವು?

    *ಅಥವಾ*

    ಭಾರತ ಮತ್ತು ಪಾಕಿಸ್ತಾನ ಬಾಂಧವ್ಯಕ್ಕೆ ಅಡ್ಡಿಯಾಗಿರುವ ಅಂಶಗಳಾವುವು?

(ಪ್ರ.ತಿ.ನೋ)

20. ಭಾರತೀಯ ಸಮಾಜದಲ್ಲಿ ಸಾಮಾಜಿಕ ಅಸಮಾನತೆ ಉಂಟು ಮಾಡುವ ಅಂಶಗಳಾವುವು?

ಅಥವಾ

ಸಂಭಾವನೆ ರಹಿತ ದುಡಿಮೆಯು ಸಂಭಾವನೆ ಸಹಿತ ದುಡಿಮೆಗಿಂತ ಹೇಗೆ ಭಿನ್ನವಾಗಿದೆ. ವಿವರಿಸಿ.

21. ಭಾರತದ ಉತ್ತರ ಮೈದಾನದ ಪ್ರಾಮುಖ್ಯತೆ ತಿಳಿಸಿ.

22. ಮಣ್ಣಿನ ಸಂರಕ್ಷಣಾ ವಿಧಾನಗಳನ್ನು ಪಟ್ಟಿ ಮಾಡಿರಿ.

23. ರಾಷ್ಟ್ರೀಯ ವರಮಾನದ ಮೂಲಕ ದೇಶದ ಅಭಿವೃದ್ಧಿಯನ್ನು ಅಳೆಯುವುದು ಸಮಂಜಸವಲ್ಲ ಏಕೆ?

24. ಬ್ಯಾಂಕ್ ಖಾತೆ ತೆರೆಯುವುದರಿಂದಾಗುವ ಅನುಕೂಲಗಳಾವುವು?

**IV ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಉತ್ತರಿಸಿ.** **9x3=27**

25. ಬ್ರಿಟಿಷರ ಭೂಕಂದಾಯ ಪದ್ಧತಿಯಿಂದಾದ ಪರಿಣಾಮಗಳಾವುವು?

ಅಥವಾ

ದೋಂಡಿಯಾ ವಾಘ್ ಆಂಗ್ಲರ ವಿರುದ್ಧ ದಂಗೆ ಏಳಲು ಕಾರಣವಾದ ಸನ್ನಿವೇಶಗಳೇನು?

26. ಶ್ರೀ ನಾರಾಯಣಗುರುರವರನ್ನು ಒಬ್ಬ ಪ್ರಮುಖ ಸಾಮಾಜಿಕ ಸುಧಾರಕ ಎಂದು ಏಕೆ ಪರಿಗಣಿಸಲಾಗಿದೆ?

27. 1857ರ ದಂಗೆಗೆ ಆರ್ಥಿಕ ಹಾಗೂ ಸೈನಿಕ ಕಾರಣಗಳಾವುವು?

28. ಭ್ರಷ್ಟಾಚಾರ ನಿರ್ಮೂಲನೆಗೆ ಯಾವ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ?

29. ಅಸ್ಪೃಶ್ಯತೆ ತೊಡೆದು ಹಾಕಲು ಭಾರತ ಕೈಗೊಂಡಿರುವ ಕ್ರಮಗಳಾವುವು?

30. ಅರಬ್ಬೀ ಸಮುದ್ರದ ಶಾಖೆಯು ಬಂಗಾಳಕೊಲ್ಲಿ ಶಾಖೆಗಿಂತ ಹೇಗೆ ಭಿನ್ನವಾಗಿದೆ?

ಅಥವಾ

ನಿತ್ಯ ಹರಿದ್ವರ್ಣ ಕಾಡುಗಳು ಮಾನ್ಸೂನ್ ಕಾಡುಗಳಿಗಿಂತ ಹೇಗೆ ಭಿನ್ನವಾಗಿವೆ?

31. ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳಾವುವು?

32. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸಿ.

ಅಥವಾ

ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರವನ್ನು ವಿವರಿಸಿ.

33. ಬ್ಯಾಂಕಿನಲ್ಲಿ ಖಾತೆ ತೆರೆಯಲು ಅನುಸರಿಸಬೇಕಾದ ಹಂತಗಳಾವುವು?

ಅಥವಾ

ಉದ್ಯಮಗಾರಿಕೆಯ ಗುಣಲಕ್ಷಣಗಳಾವುವು?

**V ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎಂಟು ವಾಕ್ಯಗಳಲ್ಲಿ ಉತ್ತರಿಸಿ.** **4x4=16**

34. 1857ರ ದಂಗೆಯು ನಿರೀಕ್ಷಿತ ಯಶಸ್ಸು ಗಳಿಸಲಿಲ್ಲ ಏಕೆ?

ಅಥವಾ

ಭಾರತೀಯ ಸಮಾಜ ಸುಧಾರಣೆಗೆ ಆರ್ಯ ಸಮಾಜವು ಹೇಗೆ ಶ್ರಮಿಸಿತು?

35. ನಾಲ್ಕನೇ ಆಂಗ್ಲೋ - ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿ.

36. ಕೋಮುವಾದವನ್ನು ನಿಯಂತ್ರಿಸಲು ಕೈಗೊಳ್ಳಬಹುದಾದ ಮುನ್ನೆಚ್ಚರಿಕಾ ಕ್ರಮಗಳಾವುವು?

37. ಭಾರತದಲ್ಲಿ ಭೂ ಬಳಕೆಯ ಅರ್ಥ ಮತ್ತು ವಿಂಗಡಣೆಗಳನ್ನು ತಿಳಿಸಿ.

**VI 38.** **ಭಾರತದ ನಕ್ಷೆಯನ್ನು ಬರೆದು ಇವುಗಳನ್ನು ಗುರುತಿಸಿ.** **1+4=5**

ಎ. ಕೆ.2/ ಗಾಡ್ವಿನ್ ಆಸ್ಟಿನ್ ಬಿ. ಇಂದಿರಾ ಪಾಯಿಂಟ್

ಸಿ. ಹಿರಾಕುಡ್ ಡಿ. ಬಂಗಾಳದ ದುಃಖದ ನದಿ